This question paper consists of 31 questions and 16 printed pages.
ಈ ಪ್ರಶ್ನೆಪತ್ರಿಕೆಯಲ್ಲಿ 31 ಪ್ರಶ್ನೆಗಳಿದ್ದು 16 ಮುದ್ರಿತ ಪುಟಗಳನ್ನು ಹೊಂದಿದೆ.

Roll No.
ರೋಲ್ ನಂ.

Code No. 69/S/A/K
ಕೋಡ್ ನಂ.

Set / ಸೆಟ್ - A

# KANNADA
## ಕನ್ನಡ
## (208)

Day and Date of Examination
ಪರೀಕ್ಷೆಯ ದಿನ ಮತ್ತು ತಾರೀಖು ________

Signature of Invigilators 1. ________
ಉಸ್ತುವಾರಿದಾರರ ರುಜು
2. ________

### ಸಾಮಾನ್ಯ ಸೂಚನೆಗಳು:

1 ಎಲ್ಲಾ ಪ್ರಶ್ನೆಗಳ ಉತ್ತರಗಳನ್ನು ನಿಮಗೆ ಕೊಟ್ಟಿರುವ ಉತ್ತರ ಪತ್ರಿಕೆಯಲ್ಲಿಯೇ ಬರೆಯಬೇಕು.

2 ಈ ಪ್ರಶ್ನೆ-ಪತ್ರಿಕೆಯನ್ನು ಓದಲು 15 ನಿಮಿಷಗಳನ್ನು ಕೊಡಲಾಗಿದೆ. ಪ್ರಶ್ನೆ-ಪತ್ರಿಕೆಯನ್ನು ಮಧ್ಯಾಹ್ನ 02.15 ಗಂಟೆಗೆ ಕೊಡಲಾಗುವುದು. 02.15 ರಿಂದ 02.30 ರ ಅವಧಿಯಲ್ಲಿ ವಿದ್ಯಾರ್ಥಿಗಳು ಪ್ರಶ್ನೆಪತ್ರಿಕೆಯನ್ನು ಮಾತ್ರ ಓದಬೇಕು ಮತ್ತು ಆ ಸಮಯದಲ್ಲಿ ಉತ್ತರ-ಪತ್ರಿಕೆಯಲ್ಲಿ ಯಾವುದೇ ಉತ್ತರ ಬರೆಯಕೂಡದು.

3 ವಿದ್ಯಾರ್ಥಿಗಳು ಪ್ರಶ್ನೆ - ಪತ್ರಿಕೆಯ ಮೊದಲ ಪುಟದಲ್ಲಿ ತಮ್ಮ ರೋಲ್ ನಂಬರ್ ಬರೆಯಬೇಕು.

4 ನಿಮಗೆ ಕೊಟ್ಟಿರುವ ಪ್ರಶ್ನೆ ಪತ್ರಿಕೆಯ ಮೊದಲ ಮೇಲ್ಭಾಗದಲ್ಲಿ ಕೊಟ್ಟಿರುವ ಒಟ್ಟು ಪುಟಗಳ ಸಂಖ್ಯೆ ಹಾಗೂ ಒಟ್ಟು ಪ್ರಶ್ನೆಗಳ ಸಂಖ್ಯೆಗೆ ತಕ್ಕಂತೆ, ಪ್ರಶ್ನೆ-ಪತ್ರಿಕೆಯಲ್ಲಿ ಎಲ್ಲಾ ಪುಟಗಳೂ ಹಾಗೂ ಪ್ರಶ್ನೆಗಳು ಮುದ್ರಿತವಾಗಿದೆಯೇ ಒಂದು ಪರೀಕ್ಷಿಸಿ, ಪ್ರಶ್ನೆಗಳ ಕ್ರಮಸಂಖ್ಯೆ ಸರಿಯಾಗಿದೆಯೇ ಎಂದು ಪರೀಕ್ಷಿಸಿ.

5 ವಸ್ತುನಿಷ್ಠ ಪ್ರಶ್ನೆಗಳಿಗೆ ಸೂಕ್ತ ಉತ್ತರವನ್ನು ಪ್ರಶ್ನೆಯ ಜೊತೆಯಲ್ಲಿ ನೀಡಿರುವ ಉತ್ತರಗಳಿಂದಲೇ ಆರಿಸಿಕೊಳ್ಳಬೇಕು. ನಿಮಗೆ ಕೊಟ್ಟಿರುವ ಬೇರೆ ಉತ್ತರ ಪತ್ರಿಕೆಯಲ್ಲಿ ಸರಿಯಾದ ಉತ್ತರ ಸಂಖ್ಯೆ (A), (B), (C), (D) ಯನ್ನು ಬರೆಯಬೇಕು.

6 ಎಲ್ಲಾ ಪ್ರಶ್ನೆಗಳಿಗೂ ನಿರ್ದಿಷ್ಟ ಸಮಯದಲ್ಲಿಯೇ ಉತ್ತರ ಬರೆಯಬೇಕು. ವಸ್ತುನಿಷ್ಠ ಪ್ರಶ್ನೆಗಳಿಗೆ ಬೇರೆ ಸಮಯವನ್ನು ನೀಡಲಾಗುವುದಿಲ್ಲ.

7 ನಿಮ್ಮ ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ನಿರ್ದಿಷ್ಟ ಜಾಗದಲ್ಲಿ ಮಾತ್ರ ನಿಮ್ಮ ರೋಲ್ ನಂಬರ್ ಬರೆಯಬೇಕು. ಹಾಗಲ್ಲದೇ ಬೇರೆ ಎಲ್ಲಿಯೂ ನಿಮ್ಮ ಗುರುತು ನೀಡಬಹುದಾದ ನಿಮ್ಮ ರೋಲ್ ನಂಬರ್ ಅನ್ನು ಬರೆಯಕೂಡದು. ಒಂದುವೇಳೆ ಹಾಗೇನಾದರೂ ಕಂಡುಬಂದಲ್ಲಿ ಅಂತಹ ವಿದ್ಯಾರ್ಥಿಗಳನ್ನು ಅನರ್ಹಗೊಳಿಸಲಾಗುವುದು.

8 ನಿಮ್ಮ ಪ್ರಶ್ನೆ ಪತ್ರಿಕೆಯ ಕೋಡ್ ನಂಬರ್ 69/S/A/K ಸೆಟ್ A ಉತ್ತರ ಪತ್ರಿಕೆಯಲ್ಲಿ ಬರೆಯಿರಿ.



Unnati Educations
9899436384, 9654279279

# KANNADA

## ಕನ್ನಡ

## (208)

ಸಮಯ : 3 ಗಂಟೆಗಳು ] [ಗರಿಷ್ಠ ಅಂಕ : 100

ಸೂಚನೆಗಳು : (i) ಎಲ್ಲಾ ಪ್ರಶ್ನೆಗಳಿಗೂ ಉತ್ತರಗಳನ್ನು ಉತ್ತರ ಪುಸ್ತಕದಲ್ಲೇ ಬರೆಯಿರಿ.

(ii) ಪ್ರಶ್ನೆಮತ್ತು ಉಪಪ್ರಶ್ನೆಗಳ ಸಂಖ್ಯೆಗಳನ್ನು ಸರಿಯಾಗಿ ಬರೆಯಿರಿ.

(iii) ಆಂತರಿಕ ಆಯ್ಕೆ ಪ್ರಶ್ನೆಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ಪ್ರಶ್ನೆಗಳಿಗೂ ಕಡ್ಡಾಯವಾಗಿ ಉತ್ತರಿಸಿರಿ.

---

ಈ ಕೆಳಗಿನ ಗದ್ಯಭಾಗವನ್ನು ಸರಿಯಾಗಿ ಓದಿ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಸರಿಯಾಗಿ ಉತ್ತರಿಸಿ.

ಮಾನವನಿಗೆ ಕಾಯಿಲೆ ಬರುವುದು ಸಹಜ. ಜ್ವರ, ಕೆಮ್ಮು, ಅಜೀರ್ಣ, ತಲೆನೋವಲ್ಲದೆ, ಕ್ಷಯ, ರಕ್ತದ ಒತ್ತಡ, ಅಸ್ತಮಾ, ಸಕ್ಕರೆಕಾಯಿಲೆ ಮುಂತಾದ ಜೈವಿಕ ಕಾಯಿಲೆಗಳು. ಅಲ್ಲದೆ ಪ್ರಾಣಕ್ಕೆ ಸಂಚಕಾರ ತರಬಲ್ಲ ಕ್ಯಾನ್ಸರ್, ಹೃದಯ ಬೇನೆ, ನ್ಯೂಮೋನಿಯ, ಈ ಕಾಯಿಲೆಗಳಿಗೆ ಮಾನವ ತುತ್ತಾಗುತ್ತಾನೆ. ರೋಗ ಬಂದಾಗ ವೈದ್ಯರಲ್ಲಿಗೆ ಹೋಗುತ್ತಾನೆ. ತರಬೇತಿ ಪಡೆದ ವೈದ್ಯರು ಕಾಯಿಲೆ ಪತ್ತೆ ಹಚ್ಚಿ ರೋಗ ನಿರ್ಧಾರ ಮಾಡಿ ಗುಣಪಡಿಸುವರು. ಕಾಯಿಲೆ ವಾಸವಾಗದಿದ್ದಾಗ ರೋಗಿಗಳು "ಸರಿಯಾಗಿ ಔಷಧ ಕೊಡಲಿಲ್ಲ ಎಂದು ವೈದ್ಯರನ್ನು ದೂರುತ್ತಾರೆ", "ನಾನೇನು ಮಾಡಲಿ ಕೊಟ್ಟಿದನ್ನು ಸರಿಯಾಗಿ ತೆಗೆದುಕೊಳ್ಳಲಿಲ್ಲ" ಎಂದು ವೈದ್ಯರು ದೂಷಿಸುತ್ತಾರೆ. ವಿವಿಧ ರೀತಿಯ ಔಷಧ ಸೇವಿಸುತ್ತಾರೆ. ವೈದ್ಯರ ಬಳಿ ಹೋದಾಗ ಕೆಲವು ನಿಯಮಗಳನ್ನು ಪಾಲಿಸಿದರೆ ಚಿಕಿತ್ಸೆ ರೂಪಿಸುವುದು ಸುಲಭವಾಗಿ ಕಾಯಿಲೆ ಗುಣವಾಗುವುದು.

ವೈದ್ಯರ ಬಳಿ ಹೋದಾಗ ಕೆಲವೊಮ್ಮೆ ಹೇಳುವುದನ್ನು ಮರೆತು ಹೋಗಬಹುದು. ರೋಗ ಹೇಗೆ ಪ್ರಾರಂಭವಾಯಿತು ಇದೆಲ್ಲವನ್ನು ಹೇಳದಿದ್ದರೆ ರೋಗ ನಿರ್ಧಾರಮಾಡುವುದು ಕಷ್ಟವಾಗುತ್ತದೆ. ಆದ್ದರಿಂದ ಎಲ್ಲವನ್ನು ಒಂದು ಚೀಟಿಯಲ್ಲಿ ಬರೆದುಕೊಂಡು ಹೋಗುವುದರಿಂದ ವೈದ್ಯರಿಗೆ ಪೂರ್ಣ ಮಾಹಿತಿ ಕೊಡಲು ಸಾಧ್ಯವಾಗುತ್ತದೆ.

1 ಗದ್ಯಭಾಗವನ್ನು ಓದಿ ಅರ್ಥಮಾಡಿಕೊಂಡಿರುವ ಪ್ರಕಾರ ಈ ಕೆಳಗೆ ಕೊಟ್ಟಿರುವ ವಾಕ್ಯಗಳು ಸರಿ ಅಥವಾ ತಪ್ಪು ತಿಳಿಸಿರಿ. 1×3=3

(a) ಕಾಯಿಲೆ ವಾಸಿಯಾಗದಿದ್ದಾಗ ರೋಗಿಗಳು ಸರಿಯಾಗಿ ಔಷಧಿ ಕೊಡಲಿಲ್ಲ ಎಂದು ವೈದ್ಯರನ್ನು ದೂರುತ್ತಾರೆ.

(b) ಮಾನವನಿಗೆ ಕಾಯಿಲೆ ಬರುವುದು ಅಸಹಜ.

(c) ರಕ್ತದ ಒತ್ತಡ, ಅಸ್ತಮಾ, ಸಕ್ಕರೆಕಾಯಿಲೆ ಇವು ಜೈವಿಕ ಕಾಯಿಲೆಗಳು.



Unnati Educations
9899436384, 9654279279

2 ಓದಿದ ಗದ್ಯಭಾಗಕ್ಕೆ ಸಂಬಂಧಿಸಿದ ಕೆಳಗಿನ ಪ್ರಶ್ನೆಗಳಿಗೆ ಒಂದು 'ಪದ'ದಲ್ಲಿ ಉತ್ತರಿಸಿ. 1×3=3

(a) ಪ್ರಾಣಕ್ಕೆ ಸಂಚಕಾರ ತರಬಲ್ಲ ಯಾವುದಾದರೂ ಒಂದು ಕಾಯಿಲೆ ಹೆಸರು ತಿಳಿಸಿ.

(b) ತರಬೇತಿ ಪಡೆದ ವೈದ್ಯರು ಹೇಗೆ ಗುಣಪಡಿಸುವರು?

(c) ವೈದ್ಯರಿಗೆ ಪೂರ್ಣ ಮಾಹಿತಿ ಕೊಡಲು ಹೇಗೆ ಸಾಧ್ಯ?

3 ಸೂಚಿಸಿದಂತೆ ಸರಿಯಾದ ಪದವನ್ನು ಆರಿಸಿ ಬರೆಯಿರಿ. 1×1=1

'ರೋಗ' ಈ ಪದದ ವಿರುದ್ಧಪದ

(a) ಅರೋಗ (b) ರೋಗವಲ್ಲ

(c) ನಿರೋಗ (d) ಆರೋಗ್ಯ

4 ಈ ಕೆಳಕಂಡ ಸಾಲುಗಳನ್ನು ಪರಾಮರ್ಶಿಸಿ, ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿರಿ: 5×1=5

ನೀವು ಪ್ರಕಾಶ ಬೆಂಗಳೂರು ನಿವಾಸಿ ಎಂದು ಭಾವಿಸಿ

ವಿಜಯ ಕರ್ನಾಟಕ ಪತ್ರಿಕೆಯ ಸಂಪಾದಕರಿಗೆ ಬೆಂಗಳೂರು ನಗರದಲ್ಲಿ ಬೀದಿ ನಾಯಿಗಳ ಹಾವಳಿ ಹೆಚ್ಚಾಗಿದೆ. ಮೊನ್ನೆ ಮೊನ್ನೆ ಒಬ್ಬ ಮಹಿಳೆಯ ಮೇಲೆ ಹಾವಳಿಮಾಡಿ ಗಾಯಗೊಳಿಸಿವೆ. ಅಲ್ಲದೇ ಒಂದು ಮಗುವನ್ನು ಕೊಂದು ಹಾಕಿವೆ. ಇದರಿಂದ ಜನರ ಓಡಾಟ ದುಸ್ತರವಾಗುತ್ತಿದೆ. ಆದ್ದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದರ ಬಗ್ಗೆ ಗಮನ ಹರಿಸುವಂತೆ ಮಾಡಲು ಒಂದು ಪತ್ರ ಬರೆಯಿರಿ.

(i) ಈ ಪತ್ರಕ್ಕೆ "ಸರಿಯಾದ" ವಿಷಯವನ್ನು ಆರಿಸಿ

(A) ನಾಯಿಗಳನ್ನು ದೃಷ್ಟಿಸುವುದು

(B) ನಾಯಿಗಳನ್ನು ಗುರ್ತಿಸುವುದು

(C) ಬೀದಿ ನಾಯಿಗಳ ಸಂರಕ್ಷಣೆ

(D) ಬೀದಿ ನಾಯಿಗಳಿಂದ ಸಾರ್ವಜನಿಕರ ರಕ್ಷಣೆ

(ii) ಈ ಪತ್ರಕದ ಮುಖ್ಯ ಉದ್ದೇಶ .............

(A) ಪತ್ರಿಕೆಯ ಸಂಪಾದಕರ ಸಂತೋಷಕ್ಕಾಗಿ

(B) ವಿಜಯ ಕರ್ನಾಟಕ ಪತ್ರಿಕೆಯ ಪ್ರಸಾರದ ಹೆಚ್ಚಳಕ್ಕೆ

(C) ಬೀದಿ ನಾಯಿಗಳನ್ನು ಗುರ್ತಿಸುವುದು.

(D) ಸಂಬಂಧಪಟ್ಟ ಅಧಿಕಾರಗಳ ಗಮನಕ್ಕೆ ತರುವುದು ಹಾಗೂ ಜನರ ಪ್ರಾಣ ರಕ್ಷಣೆ.



Unnati Educations
9899436384, 9654279279

(iii) ಈ ಪತ್ರಕ್ಕೆ ಪ್ರಕಾಶರವರು ಆಯ್ಕೆಮಾಡಿರುವ ಸಂಬಂಧಪಟ್ಟ ದೃಷ್ಟಿ ಕೋನ ಈ ರೀತಿ ಇದೆ.

(1) ದಿನಪತ್ರಿಕೆಯ ಹೆಸರು

(2) ಪ್ರಕಾಶರವರ ವಿಳಾಸ

(3) ಸಮಸ್ಯೆ ಕುರಿತು ಔಪಚಾರಿಕ ಧ್ವನಿ

(4) ಬೀದಿ ನಾಯಿಗಳ ನಿಯಂತ್ರಣ

(5) ಪತ್ರ ಸ್ವೀಕರಿಸುವ ನಿರೀಕ್ಷಿತ ದಿನಾಂಕ

(A) (1) ಮತ್ತು (2) (B) (3) ಮತ್ತು (4)

(C) (1) ಮತ್ತು (5) (D) (2) ಮತ್ತು (3)

(iv) ಬೀದಿ ನಾಯಿಗಳ ನಿಯಂತ್ರಣಕ್ಕೆ ಪ್ರಕಾಶ ಅವರು ನೀಡುವ ಪ್ರಮುಖ ಕಾರಣವೇನು?

(A) ಬೀದಿ ನಾಯಿಗಳು ಸಾರ್ವಜನಿಕರ ಮೇಲೆ ಹಲ್ಲೆ ಮಾಡಿವೆ.

(B) ಬೀದಿ ನಾಯಿಗಳ ರಕ್ಷಣೆ.

(C) ನಾಯಿಗಳನ್ನು ಓಡಿಸುವುದು.

(D) ಬೀದಿ ನಾಯಿಗಳ ಕಿರಿಚಾಟ.

(v) ಈ ಪತ್ರದ ತೀರ್ಮಾನಕ್ಕೆ ಸರಿಯಾದ ಮತ್ತು ನ್ಯಾಯ ದೊರಕಿಸುವಂತಹ ಆಯ್ಕೆಯನ್ನು ಮಾಡಿರಿ.

ನನ್ನ ಅಭಿಪ್ರಾಯದಲ್ಲಿ ಮಾಧ್ಯಮಗಳು ಜನರನ್ನು ಜಾಗ್ರತ ಗೊಳಿಸಲು ಮಹತ್ವದ ಪಾತ್ರ ವಹಿಸುತ್ತವೆ. ಆದುದರಿಂದ ನನ್ನ ಆಲೋಚನೆಗಳು ದಿನಪತ್ರಿಕೆಯಲ್ಲಿ ಪ್ರಕಟ ಗೊಂಡರೆ ಸಾರ್ವಜನಿಕರು ಜಾಗ್ರತಗೊಂಡು ಎಚ್ಚರಿಕೆ ವಹಿಸುತ್ತಾರೆ. ಆದ್ದರಿಂದ ನನ್ನ ಆಲೋಚನೆಗಳನ್ನು ನಿಮ್ಮ ದಿನಪತ್ರಿಕೆಯಲ್ಲಿ ಪ್ರಕಟಿಸುತ್ತೀರಿ ಎಂಬ ಭರವಸೆ ಇದೆ. ಏಕೆಂದರೆ ಸಂಬಂಧಪಟ್ಟ ಮಹಾನಗರ ಸಭೆಯವರು ಮುಂದಿನ ಕ್ರಮ ತೆಗೆದುಕೊಳ್ಳುವರು.

(A) ಹೌದು ಆಯ್ಕೆಗೆ (1) ಏಕೆಂದರೆ ಇದು ಅಧಿಕಾರಯುತ ಧ್ವನಿಯಾಗಿದೆ

(B) ಇಲ್ಲ, ಆಯ್ಕೆಗೆ (1) ಏಕೆಂದರೆ ಇದು ಅನೌಪಚಾರಿಕ ಧ್ವನಿಯಾಗಿದೆ

(C) ಹೌದು ಆಯ್ಕೆಗೆ (2) ಏಕೆಂದರೆ ಇದು ಸಾರ್ವಜನಿಕರ ಪ್ರಾಣ ಕಾಪಾಡುವ ಧ್ವನಿಯಾಗಿದೆ.

(D) ಇಲ್ಲಿ ಆಯ್ಕೆಗೆ (2) ಏಕೆಂದರೆ ಇದು ನಿಶ್ಚಿತ ಧ್ವನಿಯಾಗಿದೆ



Unnati Educations
9899436384, 9654279279

5 ಈ ಕೆಳಗೆ ಕೊಟ್ಟಿರುವ ಸಾಲುಗಳನ್ನು ಪರಾಮರ್ಶಿಸಿ ಈ ಕೆಳಗೆ ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರಿಸಿ: 4×4=4

ಮೈಸೂರು ಜಿಲ್ಲೆಯಲ್ಲಿ ಬರುವ ಸುಲ್ತೂರು ಮಠದ ಜಾತ್ರೆ ಫೆಬ್ರವರಿ ತಿಂಗಳಲ್ಲಿ, ಸುಮಾರು 15 ದಿನಗಳವರೆಗೆ ನಡೆಯುತ್ತದೆ. ಕರ್ನಾಟಕದ ಮೂಲೆ ಮೂಲೆಯಿಂದ ಜನರು ಬರುತ್ತಾರೆ. ಸಾರ್ವಜನಿಕರು ಸ್ವಚ್ಛತೆ ಕಾಪಾಡಬೇಕೆಂದು ಮಠಾಧೀಶ್ವರ ಸ್ವಾಮಿಗಳು ವಿನಂತಿಸಿಕೊಂಡಿದ್ದಾರೆ. ಸಾಮಾನ್ಯವಾಗಿ ಜಾತ್ರೆಗಳಲ್ಲಿ ಕಂಡುಬರುವುದು ಏನೆಂದರೆ, ಪ್ಲಾಸ್ಟಿಕ್ ಪೇಪರ್‌ಗಳು ಎಲ್ಲೆಂದರಲ್ಲೆ ಬೀಸಾಡುವುದು, ಬೇಕಾದ ಕಡೆ ಶೌಚಾಲಯ ಇದ್ದರೂ ಮನಸ್ಸಿಗೆ ಬಂದ ಸ್ಥಳದಲ್ಲಿ ಮೂತ್ರ ವಿಸರ್ಜನೆ ಮಾಡುವುದನ್ನು ನೋಡುತ್ತೇವೆ. ಆರೋಗ್ಯದ ದೃಷ್ಟಿಯಿಂದ ಇದು ಅಪಾಯ ಗಿರಿಯಾಗಿದೆ ಆದ್ದರಿಂದ ಭಕ್ತಾದಿಗಳು ಗೊತ್ತುಪಡಿಸಿದ ಸ್ಥಳಗಳಲ್ಲಿ ಕಸವಾಗಲಿ, ಪ್ಲಾಸ್ಟಿಕ್ ಬೇಡದ ವಸ್ತುಗಳನ್ನು ಹಾಕಬೇಕು. ಸ್ವಚ್ಛತೆ ಕಾಪಾಡಬೇಕು, ರೋಗ - ರುಜಿನಗಳು ಹರಡದಂತೆ ಕಾಪಾಡಬೇಕೆಂದು ಸ್ವಾಮಿಯವರು ವಿನಂತಿಸಿಕೊಂಡಿದ್ದಾರೆ.

(i) ಮೇಲ್ಕಂಡ ಬರಹಕ್ಕೆ ಸೂಕ್ತ "ತಲೆಬರಹವನ್ನು ಆರಿಸಿ"

(A) ಸುತ್ತೂರು ಜಾತ್ರೆ

(B) ಸುತ್ತೂರು ಜಾತ್ರೆಯ ವಿಶೇಷತೆ

(C) ಸುತ್ತೂರು ಜಾತ್ರೆಯಲ್ಲಿ ಸ್ವಚ್ಛತೆ

(D) ಸ್ವಾಮಿಗಳ ವಿನಂತಿ

(ii) ಮೇಲ್ಕಂಡ ಸೂಚನೆಗೆ ಸರಿಯಾಗಿ ವಿಷಯವನ್ನು ಗುರುತಿಸಿ.

(A) ಮಾಹಿತಿಯಲ್ಲಿರಿ

(B) ಸ್ವಚ್ಛತೆಗಾಗಿ ಸಹಕರಿಸಿ

(C) ಜಾತ್ರೆಗೆ ಬನ್ನಿರಿ

(D) ಅನಾನುಕೂಲತೆಗಾಗಿ ವಿಷಾದ

(iii) ಮಠಾಧೀಶರು ನೀಡಿರುವ ಸಲಹೆ ಸೂಚನೆಗಳ ಅಂಕಿ ಅಂಶಗಳನ್ನು ಆರಿಸಿರಿ.

(A) ಫೆಬ್ರವರಿ ತಿಂಗಳಲ್ಲಿ ಜಾತ್ರೆ

(B) ಸ್ವಾಮಿಗಳು ಜಾತ್ರೆಯಲ್ಲಿ ಭಾಗವಹಿಸುವರು

(C) ಕಸ, ಪ್ಲಾಸ್ಟಿಕ್, ಬೇಡದ ವಸ್ತುಗಳನ್ನು ಗೊತ್ತುಪಡಿಸಿದ ಸ್ಥಳಗಲ್ಲಿ ಹಾಕಬೇಕು.

(D) ಜಾತ್ರೆಯನ್ನು ಆನಂದಿಸಿ.

(iv) ಸೂಚನೆ ನೀಡಲು ಆಧಾರವಾಗಿರುವ ಅಂಶಗಳನ್ನು ಗುರುತಿಸಿ.

(A) ಭಕ್ತಾದಿಗಳಿಗೆ ಸೂಚನೆ ನೀಡುವ ದಿನಾಂಕ.

(B) ಜಾತ್ರೆಯನ್ನು ಸರಿಯಾಗಿ ನಡೆಸಬೇಕು.

(C) ಜಾತ್ರೆಯಲ್ಲಿ ಗಲಾಟೆಯಾಗಬಾರದು.

(D) ಜಾತ್ರೆಯ ಜೊತೆಗೆ ಭಕ್ತಾದಿಗಳ ಆರೋಗ್ಯ ಮುಖ್ಯ.



Unnati Educations
9899436384, 9654279279

6 ಈ ಕೆಳಗಿನ ವ್ಯಕ್ತಿ ಚಿತ್ರಣವನ್ನು ಗಮನಿಸಿ ಸರಿಯಾಗಿ ಓದಿ, ಕೊಟ್ಟ ಪ್ರಶ್ನೆಗಳಿಗೆ ಉತ್ತರಿಸಿ. 1×4=4

ಸರ್ ಎಂ. ವಿಶ್ವೇಶ್ವರಯ್ಯ ಅವರು ಕ್ರಿಸ್ತಶಕ ೧೮೬೦ ಸಪ್ಟೆಂಬರ್ ೧೫ ರಂದು ಶ್ರೀನಿವಾಸ ಶಾಸ್ತ್ರ ಮತ್ತು ವೆಂಕಟಲಕ್ಷ್ಮಮ್ಮ ಅವರ ಎರಡನೆಯ ಮಗನಾಗಿ ಜನಿಸಿದರು. ಪ್ರಾಥಮಿಕ ಶಿಕ್ಷಣ ಚಿಕ್ಕಬಳ್ಳಾಪುರದಲ್ಲಿ ನಡೆಯಿತು. ನಂತರ ಪೂನಾದ ಎಂಜಿನಿಯರಿಂಗ್ ಕಾಲೇಜಿನಲ್ಲಿ ಡಿಪ್ಲೊಮಾ ಶಿಕ್ಷಣವನ್ನು ಪ್ರಥಮಸ್ಥಾನದಲ್ಲಿ ಪಡೆದು ಜೇಮ್ಸ್ ಬರ್ಕ್ಲಿ ಬಹುಮಾನಪಡೆದರು. ಜಲಾಶಯಗಳಿಗೆ ಸ್ವಯಂ ಚಾಲಿತ ಬಾಗಿಲುಗಳ ಅನ್ವೇಷಣೆ ಮಾಡಿದರು. ಈಗಿನ ಮಂಡ್ಯ ಜಿಲ್ಲೆಯ ಕೃಷ್ಣರಾಜಸಾಗರ ಜಲಾಶಯಕ್ಕೂ ಸ್ವಯಂ ಚಾಲಿತ ಬಾಗಿಲುಗಳನ್ನು ಅಳವಡಿಸಲಾಗಿದೆ.

ಗೊಮ್ಮಟ ವ್ಯಕ್ತಿತ್ವದ ದಾರ್ಶನಿಕ ನೇತಾರರಾಗಿ 'ಆಡು ಮುಟ್ಟದ ಸೊಪ್ಪಿಲ್ಲ' ಎಂಬ ಗಾದೆ ಮಾತಿನಂತೆ ಬೆಳೆದ ವಿಶ್ವೇಶ್ವರಯ್ಯ ಅವರಿಗೆ ಬ್ರಿಟಿಷ್ ಸರ್ಕಾರ 'ಸರ್' ಪದವಿಯನ್ನು ನೀಡಿ ಗೌರವಿಸಿತು. ಅವರ ಸಾಧನೆಯನ್ನು ಗುರುತಿಸಿ ಭಾರತ ಸರ್ಕಾರ ದೇಶದ ಅತ್ಯುನ್ನತ 'ಭಾರತ ರತ್ನ' ಪ್ರಶಸ್ತಿಯನ್ನು ಸಲ್ಲಿಸಿತು. ೧೦೨ ವರ್ಷಗಳ ತುಂಬು ಜೀವನ ಪೂರೈಸಿದ ಸರ್ ಎಂ.ವಿ. ಅವರು ೧೯೬೨ ರಲ್ಲಿ ಇಹಲೋಕ ತ್ಯಜಿಸಿದರು.

(i) ವಿಶ್ವೇಶ್ವರಯ್ಯ ಅವರು ಪ್ರಾಥಮಿಕ ಶಿಕ್ಷಣ ಪಡೆದದ್ದು .........

(A) ಬೆಂಗಳೂರು (B) ಚಿಕ್ಕಬಳ್ಳಾಪುರ

(C) ದೊಡ್ಡಬಳ್ಳಾಪುರ (D) ಕೋಲಾರ

(ii) ಬ್ರಿಟಿಷ್ ಸರ್ಕಾರ ನೀಡಿದ ಪದವಿ .........

(A) ಭಾರತ ರತ್ನ (B) ಗೌರವ

(C) ಸರ್ (D) ದಾರ್ಶನಿಕ

(iii) ವಿಶ್ವೇಶ್ವರಯ್ಯ ಅವರ ತಂದೆಯ ಹೆಸರು .........

(A) ಶ್ರೀನಿವಾಸ ಶಾಸ್ತ್ರಿ (B) ಲಾಲ ಬಹದ್ದೂರ್ ಶಾಸ್ತ್ರಿ

(C) ಕೃಷ್ಣ ಶಾಸ್ತ್ರಿ (D) ವೆಂಕಟ ಶಾಸ್ತ್ರಿ

(iv) ಭಾರತ ದೇಶದ ಅತ್ಯುನ್ನತ ಪ್ರಶಸ್ತಿ ..........

(A) ಪದ್ಮಶ್ರೀ (B) ಪದ್ಮ ವಿಭೂಷಣ

(C) ಅರ್ಜುನ (D) ಭಾರತ ರತ್ನ



Unnati Educations
9899436384, 9654279279

7 ಕೆಳಗೆಕೊಟ್ಟಿರುವ ಪದಗಳನ್ನು ಬಳಸಿ ಅರ್ಥಪೂರ್ಣ ವಾಕ್ಯಗಳನ್ನು ರಚಿಸಿರಿ. 1×3=3

(1) ಯಜಮಾನ

(2) ಆದಾಯ

(3) ಜಾತ್ರೆ

ಅಥವಾ

ಕೆಳಗೆ ಕೊಟ್ಟಿರುವ ವಾಕ್ಯಗಳನ್ನು ಓದಿ ಅವುಗಳ ಶುದ್ಧರೂಪ ಬರೆಯಿರಿ.

(1) ಲೇಕಕರಿಗೆ ಪತ ಬರೆದವರ ಯಾರ?

(2) ಕಡೂರನಲ್ಲಿ ಒಂದ ಮಠವದೆ.

(3) ಗ್ರಾಮದಲ್ಲಿ ಒಂದ ದೇವಾಲಯ ಇದೆ.

8 ಕೆಳಕಂಡ ಪದಗಳನ್ನು ಕೂಡಿಸಿ ಸಂಧಿ ಹೆಸರಿಸಿ. 1×3=3

(1) ಚಿತ್ + ಮಯ

(2) ಸತ್ + ಉತ್ತರ

(3) ಗತಿ + ಅಂತರ

ಅಥವಾ

ಕೆಳಕಂಡ ಪದಗಳನ್ನು ಬಿಡಿಸಿ ಸಂಧಿಯ ಹೆಸರನ್ನು ಬರೆಯಿರಿ.

(1) ಜಲೌಘ

(2) ಸುರೇಂದ್ರ

(3) ದೇವಾಸುರ



Unnati Educations
9899436384, 9654279279

9 ಈ ಕೆಳಗೆ ಕೊಟ್ಟಿರುವ ವಾಕ್ಯಗಳಿಗೆ ಸೂಚನೆಗೆ ಅನುಗುಣವಾಗಿ ಉತ್ತರಿಸಿ. 1×3=3

(1) ವಿದ್ಯಾರ್ಥಿಗಳು ಮುಂಜಾನೆ ಬೇಗ ಏಳಬೇಕು.

ಕ್ರಿಯಾಪದವನ್ನು ಆರಿಸಿ ಬರೆಯಿರಿ.

(2) ವಿರಾಟ್ ಕೋಹ್ಲಿ ಶ್ರೇಷ್ಠ ಆಟಗಾರ.

ವಿಶೇಷಣ ಪದವನ್ನು ಆರಿಸಿ ಬರೆಯಿರಿ.

(3) ದೇವಿಕಾ ಶಾಲೆಗೆ ಬೇಗ ಬೇಗ ಹೋದಳು.

ದ್ವಿರುಕ್ತಿ ಪದವನ್ನು ಆರಿಸಿ ಬರೆಯಿರಿ.

ಅಥವಾ

ಬಿಟ್ಟ ಸ್ಥಳವನ್ನು ಸರಿಯಾದ ಪದಗಳಿಂದ ತುಂಬಿರಿ.

(1) ಮಾಸ್ತಿ ವೆಂಕಟೇಶ್ ಆಯ್ಯಂಗಾರ ಅವರ ಕಾವ್ಯನಾಮ ............

(A) ಪುತಿನ (B) ಶ್ರೀನಿವಾಸ

(C) ಕುವೆಂಪು (D) ಅಂಬಿಕಾತನಯ ದತ್ತ

(2) ಪೂರ್ಣಚಂದ್ರ ತೇಜಸ್ವಿ ಅವರು ಬರೆದ ಕೃತಿ ............

(A) ನಾಕುತಂತಿ (B) ಪಕ್ಷಿಕಾಶಿ

(C) ಕರ್ವಾಲೋ (D) ಬೆಳಕು

(3) ಪೂರ್ಣಚಂದ್ರ ತೇಜಸ್ವಿ ಅವರ ತಂದೆಯ ಹೆಸರು ..........

(A) ಮಾಸ್ತಿ (B) ಬೇಂದ್ರೆ

(C) ಕಣವಿ (D) ಕುವೆಂಪು



Unnati Educations
9899436384, 9654279279

10 ಕೆಳಕಂಡ ಬಿಟ್ಟ ಸ್ಥಳಗಳನ್ನು ಸೂಕ್ತ ಕ್ರಿಯಾಪದಗಳಿಂದ ಭರ್ತಿಮಾಡಿರಿ. 1×4=4

(1) ತಾಜಮಹಲ ತುಂಬಾ ಸುಂದರವಾಗಿ ________

(2) ನಾಯಿ ಬೌಬೌ ಎಂದು ________

(3) ಜ್ವರ ಬಂದಾಗ ನಾವು ಔಷಧಿಯನ್ನು ________

(4) ರಾಮನೂ ಲಕ್ಷ್ಮಣನೂ ಜೊತೆಯಾಗಿ ವನವಾಸಕ್ಕೆ ________

11 ಕೆಳಕಂಡ ವಾಕ್ಯಗಳಿಗೆ ಸೂಕ್ತ ಲೇಖನ ಚಿಹ್ನೆಗಳನ್ನು ಹಾಕಿರಿ. 1×2=2

(1) ನೀರಿನ ಮೂಲಗಳು ಎಂದರೆ ಕೆರೆ ಬಾವಿ ಹಳ್ಳ ನದಿ ಮುಂತಾದವುಗಳು.

(2) ಮರಕುಟುಕ ಮರವನ್ನು ಡಮಡಮ ಎಂದು ಕುಟ್ಟುತ್ತಿತ್ತು.

12 ಸೂಕ್ತಪದಗಳಿಂದ ಬಿಟ್ಟ ಸ್ಥಳವನ್ನು ತುಂಬಿರಿ. 1×3=3

(1) ಅಹಿಂಸೆ ಪಾಠ ಗಾಂಧೀಜಿಗೆ ದೊರೆತದ್ದು ________

(1) ಸ್ನೇಹಿತರಿಂದ, (2) ತಂದೆಯಿಂದ, (3) ಹೆಂಡತಿಯಿಂದ

(2) 'ಚರಕ' ಬಡಕೂಲಿ ಹೆಣ್ಣು ಮಕ್ಕಳ ಪಾಲಿಗೆ ________

(1) ಭಾಗ್ಯಚಕ್ರ, (2) ವಿಷ್ಣುಚಕ್ರ, (3) ಅನಿಷ್ಟಚಕ್ರ

(3) ಸ್ತ್ರೀಯ ಸ್ವಭಾವಕ್ಕೆ ಹಿಂಗೆ ________.

(1) ಸಹಜಗುಣ, (2) ದೈವಗುಣ, (3) ರಾಕ್ಷಸಗುಣ

13 ಕೆಳಗಿನ ವಾಕ್ಯಗಳನ್ನು ಸರಿಯಾಗಿ ಓದಿ ಸರಿ ಅಥವಾ ತಪ್ಪು ತಿಳಿಸಿರಿ. 1×3=3

(1) 'ಅಹಿಂಸೆಯೇ ಪರಮಧರ್ಮ' ಎಂದು ನಮ್ಮ ಹಿರಿಯರು ಹೇಳಿದ್ದಾರೆ.

(2) ಗಾಂಧೀಜಿಯವರು ತನ್ನ ಹೆಂಡತಿಯಿಂದ ಹಿಂಸೆಯ ಪಾಠ ಕಲಿತರು.

(3) ರಾಮಾಯಣದಲ್ಲಿ ಸೀತೆ ತನ್ನ ಗಂಡನಿಗೆ ಇದಿರಾಡಿದಳು.



Unnati Educations
9899436384, 9654279279

14 ಈ ಕೆಳಕಂಡ ಗದ್ಯವನ್ನು ಓದಿರಿ ಹಾಗೂ ಕೆಳಕಂಡ ವಾಕ್ಯಗಳಲ್ಲಿ ಬಿಟ್ಟಿರುವ ಸ್ಥಳಗಳನ್ನು ತುಂಬಿರಿ. 1×3=3

ಇಂಡಿಯಾದಲ್ಲಿ ಹುಯೆನ್-ತ್ಸಾಂಗ್ ಹದಿನಾಲ್ಕು ವರ್ಷ ಸುತ್ತಾಡಿದನು. ಅವನು ಹಿಂದಿರುಗಿ ಹೋದಾಗ ಯಾವ ಬೌದ್ಧ ಭಿಕ್ಷುವಿಗೂ ದೊರೆಯದ ಅದ್ಭುತ ಸ್ವಾಗತ ದೊರೆಯಿತು. ಅವರು ಬೌದ್ಧ ಧರ್ಮಕ್ಕೆ ಸಂಬಂಧಪಟ್ಟ ಸಂಸ್ಕೃತದಲ್ಲಿ ಬರೆದ 657 ಗ್ರಂಥಗಳನ್ನು ಮತ್ತು ಚಿನ್ನ, ಬೆಳ್ಳಿ ಹಾಗೂ ಗಂಧದ ವಿಗ್ರಹಗಳನ್ನು ತೆಗೆದುಕೊಂಡು ಹೋದನು. ಚೀಣಾದ ಚಕ್ರವರ್ತಿ ಹುಯೆನ್-ತ್ಸಾಂಗ್ ನನ್ನು ಆತ್ಮೀಯವಾಗಿ ಕಂಡನು. ಅವನಿಗೆ ಯಾವುದಾದರೂ ಅಧಿಕಾರವನ್ನು ವಹಿಸಿಕೊಳ್ಳುವಂತೆ ಹೇಳಿದನು. ಆದರೆ ಹುಯೆನ್-ತ್ಸಾಂಗ್ ಅದಕ್ಕೆ ಒಪ್ಪದೆ ತಾನು ತಂದ ಸಂಸ್ಕೃತ ಭಾಷೆನು ಗ್ರಂಥಗಳನ್ನು ಚೀಣಿ ಭಾಷೆಗೆ ಭಾಷಾಂತರಿಸುವ ಕಾರ್ಯದಲ್ಲಿ ನಿರತನಾದನು.

(1) ಚೀಣಾದ ಚಕ್ರವರ್ತಿ ________ ನನ್ನು ಆತ್ಮೀಯವಾಗಿ ಕಂಡನು.

(2) ಯಾವ ಬೌದ್ಧ ಭಿಕ್ಷುವಿಗೂ ದೊರೆಯದ ________ ದೊರೆಯಿತು.

(3) ಸಂಸ್ಕೃತ ಭಾಷೆಯ ಗ್ರಂಥಗಳನ್ನು ________ ಭಾಷೆಗೆ ಭಾಷಾಂತರಿಸುವ ಕಾರ್ಯದಲ್ಲಿ ನಿರತನಾದನು.

15 ಈ ಕೆಳಕಂಡ ಗದ್ಯವನ್ನು ಓದಿ ಈ ಕೆಳಕಂಡ ವಾಕ್ಯಗಳು ಸರಿಯೇ, ತಪ್ಪೇ, ಎಂದು ತಿಳಿಸಿ. 1×3=3

ನಿಮ್ಮ ಮನೆಯಲ್ಲಿ ಮೇಜಿನ ಎದುರು ಕುಳಿತು ನಿಮ್ಮ ಪತ್ರವನ್ನೋ ಖರ್ಚು ಲೆಕ್ಕದ ವಿಷಯವನ್ನೋ ತಯಾರಿಸಿ ಕೊಡುವ ಪುಟ್ಟ ಕಂಪ್ಯೂಟರಿಗೆ ಇಂಥಾ ಜೀವದಾನದ ಅಖಂಡ ಶಕ್ತಿಯೂ ಇದೆ ಎಂದು ತಿಳಿದಿತ್ತೇ? ಕಂಪ್ಯೂಟರ್ ಜೀವ ಉಳಿಸಿರುವ ಇಂಥಾ ಪ್ರಕರಣಗಳು ಅನೇಕ. ಇಂದು ಕಂಪ್ಯೂಟರ್ ಕೇವಲ ಗುಣಿಸುವ 'ಗಣಕ' ಯಂತ್ರವಾಗಿ ಮಾತ್ರ ಉಳಿದಿಲ್ಲ. ನಮ್ಮ ಜೀವನ ಶೈಲಿಯನ್ನೇ ಬದಲಿಸಿರುವ ಹೊಸ ಬದುಕಿನ ಹರಿಕಾರನಾಗಿದೆ. ನಾವು ಕಲಿಯುವ, ತಿಳಿಯುವ, ಕೆಲಸ ಮಾಡುವ, ಜನರನ್ನು ಸಂಪರ್ಕಿಸುವ, ಸ್ನೇಹ ಸಂಬಂಧಗಳನ್ನು ಕಾಯ್ದುಕೊಳ್ಳುವ ಬಗೆಯಲ್ಲಿಯೇ ಕ್ರಾಂತಿ ತಂದಿದೆ. ನಮ್ಮ ಬೆರಳ ತುದಿಗೆ ಜಗತ್ತನ್ನು ತಂದಿಟ್ಟು 'ಮಾಹಿತಿಯ ಮಹಾ ಹೆದ್ದಾರಿ'ಗೆ ಬಾಗಿಲು ತೆರೆದಿದೆ.

(i) ಕಂಪ್ಯೂಟರ್ ಜೀವ ಉಳಿಸಿರುವ ಪ್ರಕರಣಗಳು ಅನೇಕ.

(ii) ಇಂದು ಕಂಪ್ಯೂಟರ್ ಕೇವಲ ಗುಣಿಸುವ 'ಗಣಕ' ಯಂತ್ರವಾಗಿ ಮಾತ್ರ ಉಳಿದಿದೆ.

(iii) ನಮ್ಮ ಬೆರಳ ತುದಿಗೆ ಜಗತ್ತನ್ನು ತಂದಿಟ್ಟು 'ಮಾಹಿತಿಯ ಮಹಾ ಹೆದ್ದಾರಿ'ಗೆ ಬಾಗಿಲು ತೆರೆದಿದೆ.



Unnati Educations
9899436384, 9654279279

16 ಹೊಂದಿಸಿ ಬರೆಯಿರಿ. 3×1=1

| | | | |
|---|---|---|---|
| (a) | ನಿಶಾಚರ | (i) | ಗಡಿಯಾರ |
| (b) | ಕುಮಾರವ್ಯಾಸ | (ii) | ಕಲಾವಿದ |
| (c) | ಲೇಖಕರ ಶತ್ರು | (iii) | ಕವಿ |
| | | (iv) | ರಾಕ್ಷಸ |

ಈ ಕೆಳಕಂಡ ಗದ್ಯಭಾಗವನ್ನು ಓದಿ ಪ್ರಶ್ನೆಗಳಿಗೆ ಉತ್ತರಿಸಿರಿ:-

ಯಕ್ಷಗಾನ ನೃತ್ಯಪ್ರಧಾನ ಕಲೆ. ಪ್ರಾರಂಭದಲ್ಲಿ ದೇಶೀ ಕಲೆಯಾಗಿದ್ದು ಅನಂತರ ಶಾಸ್ತ್ರದ ಚೌಕಟ್ಟಿಗೆ ಒಳಪಟ್ಟಿದೆ. ಇದು ಪ್ರೇಕ್ಷಕರನ್ನು ಮಂತ್ರಮುಗ್ಧರನ್ನಾಗಿಸುವ ಅಪೂರ್ವ ಶಕ್ತಿಯುಳ್ಳ ಕಲೆ. ಯಕ್ಷಗಾನದಲ್ಲಿ ಪ್ರಾದೇಶಿಕ ಪ್ರಭೇದಗಳಿವೆ, ಅದರಲ್ಲಿ ಮುಖ್ಯವಾಗಿ ಮೂರು ಶೈಲಿಗಳು ತೆಂಕುತಿಟ್ಟು, ಬಡಗುತಿಟ್ಟು, ಬಡಬಡಗುತಿಟ್ಟು. ಯಕ್ಷಗಾನಕ್ಕೆ ದಶಾವತಾರ, ಬಯಲಾಟ, ಭಾಗವತರಾಟ ಎಂಬ ಹೆಸರೂ ಇವೆ. ಸಾಮಾನ್ಯವಾಗಿ ಬಯಲಾಟ ಪ್ರದರ್ಶಿತವಾಗುವುದು ಹಳ್ಳಿಯ ಬಯಲಿನಲ್ಲಿ ಆದ್ದರಿಂದ ಅದು ಬಯಲಾಟ. ಯಕ್ಷಗಾನ ಕಲಿಸುವವನೇ ಭಾಗವತನಾದ್ದರಿಂದ ಭಾಗವತರಾಟ ಎಂಬ ಹೆಸರು ಬಂದಿದೆ. ಗೀತ, ಕುಣಿತ, ವೇಷಭೂಷಣ, ಮಾತುಗಾರಿಕೆ, ವಾದ್ಯ ಇವು ಬಯಲಾಟದ ಪಂಚ ಅಂಗಗಳು.

ಹಾಡುಗಾರಿಕೆ - ಹಾಗೂ ಕುಣಿತ - ಯಕ್ಷಗಾನದ ಪ್ರಮುಖ ಅಂಗಗಳು. ಕುಣಿತಕ್ಕೆ ತಕ್ಕಂತೆ ಅಭಿನಯ, ಜಿಗಿತ, ಸಂಭಾಷಣೆ, ಹುಬ್ಬುಗಳ ಚಲನೆ ಪ್ರೇಕ್ಷರನ್ನು ತನ್ಮಯಗೊಳಿಸುತ್ತದೆ. ಇದರಲ್ಲಿ ನವರಸಗಳ ಅಭಿವ್ಯಕ್ತಿಗೆ ಅವಕಾಶವಿದೆ. ರಾಮಾಯಣ, ಮಹಾಭಾರತ ಮತ್ತು ಭಗವತ ಪ್ರಸಂಗಗಳನ್ನು ಆಡಲಾಗುತ್ತದೆ. ಸಾಮಾನ್ಯವಾಗಿ ಕಾಳಗ, ಸಂಹಾರ, ಕಲ್ಯಾಣಗಳಿಗೆ ಸಂಬಂಧಪಟ್ಟ ಪ್ರಸಂಗಗಳನ್ನು ಹೆಚ್ಚು ಪ್ರಸ್ತುತ ಪಡಿಸಲಾಗುತ್ತದೆ. ಕೃಷ್ಣಾರ್ಜುನ ಕಾಳಗ, ಕರ್ಣಾರ್ಜುನ ಕಾಳಗ, ಬಭ್ರುವಾಹನ ಕಾಳಗ, ಸುಧನ್ವಾರ್ಜುನ ಕಾಳಗ ಮೊದಲಾದವು ವೀರರಸ ಪ್ರದಾನವಾದವುಗಳು. ಚಂದ್ರಾವಳಿ ವಿಲಾಸ, ರತಿಕಲ್ಯಾಣ, ರತ್ನಾವತಿ ಕಲ್ಯಾಣ ಮೊದಲಾದವು. ಶೃಂಗಾರ ರಸ ಪ್ರದಾನ ಪ್ರಸಂಗಗಳು. ಯಕ್ಷಗಾನ ಜನರಲ್ಲಿ ಧಾರ್ಮಿಕ ಮತ್ತು ನೀತಿ ಪ್ರಜ್ಞೆಗಳನ್ನು ಬೆಳಸಲು ಸಹಕಾರಿಯಾಗಿದೆ.


Unnati Educations
9899436384, 9654279279

17 ಯಕ್ಷಗಾನದಲ್ಲಿ ಮೂರು ಪ್ರಾದೇಶಿಕ ಪ್ರಭೇದಗಳು ಯಾವುವು? 2

ಅಥವಾ

ಬಯಲಾಟವೆಂದು ಏಕೆ ಕರೆಯುತ್ತಾರೆ?

18 ಬಯಲಾಟದ ಪಂಚ ಅಂಗಗಳು ಯಾವುವು? 2

ಅಥವಾ

ಪ್ರೇಕ್ಷಕರನ್ನು ಯಾವುದು ತನ್ಮಯಗೊಳಿಸುತ್ತದೆ?

19 ಯಕ್ಷಗಾನದಲ್ಲಿ ವೀರರಸ ಪ್ರಧಾನವಾದವುಗಳು ಯಾವುವು? 2

20 ಯಕ್ಷಗಾನದಲ್ಲಿ ಶೃಂಗಾರ ರಸ ಪ್ರಧಾನ ಪ್ರಸಂಗಗಳು ಯಾವುವು? 2

21 ನೀವು ಮಧುಕರ/ಮಧುಶ್ರೀ ಚಾಲುಕ್ಯ ನಗರ ದಾವಣಗೆರೆ ನಿವಾಸಿಗಳು ಎಂದು ಭಾವಿಸಿ, ನೀವು 10 ನೇ ತರಗತಿಯನ್ನು 1998 ಎಪ್ರಿಲ್ ತಿಂಗಳಲ್ಲಿ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿದ್ದೀರಿ. ಮುಂದಿನ ಶಿಕ್ಷಣ ವ್ಯಾಸಂಗಕ್ಕಾಗಿ ವರ್ಗಾವಣೆ ಪತ್ರಕ್ಕಾಗಿ ಮುಖ್ಯ ಶಿಕ್ಷಕರು, ಆದರ್ಶ ಪ್ರೌಢಶಾಲೆ ರಮಾನಗರ, ಹರಿಹರ ಇವರಿಗೆ ಒಂದು ಪತ್ರ ಬರೆಯಿರಿ. 4

ಅಥವಾ

ನೀವು ವಿಜಯಕುಮಾರ/ರಮ್ಯಶ್ರೀ ನಿಮ್ಮ ತಂದೆ ವಿಜಯಕುಮಾರ ಊರು ಗದಗ ನೀವು 12 ನೇ ತರಗತಿ ಉತ್ತೀರ್ಣರಾದ ವಿದ್ಯಾರ್ಥಿ/ವಿದ್ಯಾರ್ಥಿನಿ ಎಂದು ಭಾವಿಸಿ. 'ಗಾರ್ಡನರ್' ಹುದ್ದೆಗೆಂದು ಕೃಷಿ ನಿರ್ದೇಶಕರು, ತೋಟಗಾರಿಕೆ ಇಲಾಖೆ, ನವನಗರ ಬಾಗಲಕೋಟೆ ಇವರ ವಿಳಾಸಕ್ಕೆ ಭರ್ತಿಗೊಳಿಸಿದ ಅರ್ಜಿಸಲ್ಲಿಸಿ.



Unnati Educations
9899436384, 9654279279

22 ಈ ಕೆಳಕಂಡ ದೂರವಾಣಿ ಸಂಭಾಷಣೆಯನ್ನು ಸರಿಯಾಗಿ ಓದಿ ಸೂಚಿಸಿದಂತೆ ಬರೆಯಿರಿ. 2

<u>ಸಂಭಾಷಣೆ</u>

ದೂರವಾಣಿ ಕರೆ : ಹಲೋ, ನಾನು ಸವಿತಾ ನಿನ್ನ ಗೆಳತಿ ಗೀತಾ ಹೇಗಿದ್ದೀಯಾ? ವಿನಯಕುಮಾರ :- ಏನಮ್ಮ ಹೇಗಿದ್ದೀಯಾ ನಾನು ಗೀತಾಳ ತಂದೆ ಮಾತಾಡೋದು. ಸವಿತಾ :- ಅಂಕಲ್ ಚೆನ್ನಾಗಿದ್ದೇನೆ ಗೀತಾ ಎಲ್ಲಿ? ವಿನಯಕುಮಾರ :- ಅವಳು ಅಜ್ಜಿ ಹತ್ತಿರ ಹೋಗಿದ್ದಾಳೆ, ಸಾಯಂಕಾಲ ಬರುತ್ತಾಳೆ. ಏನಾದರು ಹೇಳಬೇಕಾ? ಸವಿತಾ :- ಅಂಕಲ್ ನಾನು ಅವಳು ನಾಳೆ ಮಂಡ್ಯದಲ್ಲಿ ನಡೆಯುವ ಸಾಹಿತ್ಯ ಸಮ್ಮೇಳನಕ್ಕೆ ಹೋಗಬೇಕು. ನೀವು ಅವಳಿಗೆ ಹೇಳಿ ನಾನು ಮುಂಜಾನೆ ಮನೆಗೆ ಬರುವೆ, ತಯ್ಯಾರಾಗಿರಲಿ ಇಬ್ಬರೂ ಸೇರಿ ಹೋಗುತ್ತೇವೆ. ವಿನಯಕುಮಾರ :- ಸರಿ ಅಮ್ಮ ಹೇಳುತ್ತೇನೆ.

ಸೂಚನೆ → ನೀವು ವಿನಯಕುಮಾರ ಎಂದು ಭಾವಿಸಿ ನಿಮ್ಮ ಮಗಳು ಗೀತಾ ಬರುವ ವೇಳೆ ನೀವು ಮನೆಯಲ್ಲಿ ಇರುವುದಿಲ್ಲ. ಅದಕ್ಕಾಗಿ ಮಾಹಿತಿಯನ್ನು ಬರೆಡಿಡಿ.

23 'ದೀಪಾವಳಿ' ಇದು ದೀಪಗಳ ಹಬ್ಬ. ಇದನ್ನು ಕುರಿತು ವಾಕ್ಯವೃಂದ ರಚಿಸಿ. (100 ರಿಂದ 150 ಪದಗಳು) 6

ಅಥವಾ

'ಕರ್ನಾಟಕ ರಾಜ್ಯೋತ್ಸವ' ಈ ವಿಷಯ ಕುರಿತು ಈ ಕೆಳಗೆ ಕೊಟ್ಟಿರುವ ಸುಳುಹುಗಳನ್ನು ಆಧರಿಸಿ ಪ್ರಬಂಧ ಬರೆಯಿರಿ. (100 ರಿಂದ 150 ಪದಗಳು)

(i) ಭಾಷಾವಾರು ರಾಜ್ಯಗಳು ಆದ ಸಂದರ್ಭ

(ii) ಪ್ರಾರಂಭದಲ್ಲಿ ಮೈಸೂರು ರಾಜ್ಯ

(iii) ಕರ್ನಾಟಕ ಎಂದು ಯಾವಾಗ ಆಯಿತು?

(iv) ಶಾಲೆ-ಕಾಲೇಜುಗಳಲ್ಲಿ ಹೇಗೆ ಆಚರಣೆ ಮಾಡುವರು

(v) ಕನ್ನಡ ಭಾಷೆಯ ಸಂಕ್ಷಿಪ್ತ ಇತಿಹಾಸ

(vi) ಕನ್ನಡ ಸಾಹಿತ್ಯ ಪರಿಷತ್ತು, ಕನ್ನಡ ಸಾಹಿತ್ಯ ಸಮ್ಮೇಳನಗಳು



Unnati Educations
9899436384, 9654279279

24 "ನುಡದರೆ ಸ್ಫಟಿಕದ ಸಲಾಕೆಯಂತಿರಬೇಕು" ವಾಕ್ಯದಲ್ಲಿ ಅಲಂಕಾರವನ್ನು ವಿವರಿಸಿ ಅಲಂಕಾರದ ಹೆಸರನ್ನು ಬರೆಯಿರಿ. 2

25 ಸಂಸ್ಕೃತ ಪದಕ್ಕೆ ಕನ್ನಡ ಪದ ಬರೆಯಿರಿ. $\frac{1}{2}\times4=2$

(i) ವಿಷ

(ii) ಮೃಗ

(iii) ಶಬ್ದ

(iv) ಹಂಸ

26 ಕೆಳಗೆ ಕೊಟ್ಟಿರುವ ಪದಗಳ ವಿಗ್ರಹ ವಾಕ್ಯ ಮಾಡಿ ಸಮಾಸದ ಹೆಸರು ಬರೆಯಿರಿ. 1×3=3

(i) ಆ ಮಹಿಳೆ

(ii) ಮೈದೋರು

(iii) ಇಮ್ಮಡಿ

27 ಬಿಟ್ಟ ಸ್ಥಳಗಳನ್ನು ಸೂಚನೆಗೆ ಅನುಗುಣವಾಗಿ ಭರ್ತಿ ಮಾಡಿರಿ. 1×4=4

(i) 'ಮಕ್ಕಳು' ಇದು ಬಹುವಚನ, ಏಕವಚನದಲ್ಲಿ ________ ಆಗುತ್ತದೆ.

(ii) 'ಆಕಾಶ' ಈ ಪದದ ತದ್ಭವರೂಪ ________ ಆಗುತ್ತದೆ.

(iii) 'ಪುಸ್ತಕ' ಇದಕ್ಕೆ ಪಂಚಮಿ ವಿಭಕ್ತಿ ವ್ರತ್ಯಯ ಸೇರಿಸಿದಾಗ ________ ಆಗುತ್ತದೆ.

(iv) 'ಹಿರಿದಾದ + ಹಾವು' → ಇದನ್ನು ಕೂಡಿಸಿದಾಗ ________ ಆಗುತ್ತದೆ.



Unnati Educations
9899436384, 9654279279

28 ಈ ಕೆಳಗಿನ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಆರಿಸಿ ಬರೆಯಿರಿ. 1×4=4

(i) ಪ್ರೇಮ ಪ್ರೀತಿ ನೀತಿ ವಾತ್ಸಲ್ಯ

(ii) ಕಡಲು ಆಕಾಶ ಶರಧಿ ಸಮುದ್ರ

(iii) ಮಹಿಳೆ ಅವ್ವ ತಾಯಿ ಮಾತೆ

(iv) ಪಂಕಜ ಅಂಬುಜ ಅನುಜ ನೀರಜ

ಅಥವಾ

ಹುಬ್ಬಳ್ಳಿ ಷೋರೂಂ ಒಂದರಲ್ಲಿ ಮಾರಾಟವಾದ ಕಾರುಗಳ ಸಂಖ್ಯೆ ಕೆಳಗಿದೆ ಅದರ ಸಹಾಯದಿಂದ ಏಕಾರೇಖಾ ಚಿತ್ರ ರಚಿಸಿ.

| ವರ್ಷ: | 2015 | 2016 | 2017 | 2018 | 2019 | 2020 | 2021 | 2022 |
|---|---|---|---|---|---|---|---|---|
| ಮಾರಾಟವಾದ ಕಾರುಗಳ ಸಂಖ್ಯೆ: | 10 | 15 | 21 | 25 | 29 | 32 | 38 | 45 |

29 ಈ ಕೆಳಕಂಡ ಪ್ರಶ್ನೆಗಳಿಗೆ 20 ರಿಂದ 25 ಪದಗಳಲ್ಲಿ ಉತ್ತರಿಸಿರಿ. (ಮೂರಕ್ಕೆ ಮಾತ್ರ) 2×3=6

(i) ಬಿತ್ತನೆ ಹೇಗಿರಬೇಕು? ಬಸವಣ್ಣಯಾರು?

(ii) ಹೊತ್ತಿಗೆಯಲ್ಲಿ ಏನಿದೆ? 'ಕಾಯಕವೇ ಕೈಲಾಸ್' ಹೇಗೆ?

(iii) ಬಸವಣ್ಣನವರ ಪ್ರಕಾರ ನುಡಿ ಹೇಗಿರಬೇಕು?

(iv) ಸವಿತಾ ನಾಗಭೂಷಣ ಅವರ ಸಂಕ್ಷಿಪ್ತ ಪರಿಚಯ ತಿಳಿಸಿ.


Unnati Educations
9899436384, 9654279279

**30** ಈ ಕೆಳಕಂಡ ಪ್ರಶ್ನೆಗಳಿಗೆ 20 ರಿಂದ 25 ಪದಗಳಲ್ಲಿ ಉತ್ತರಿಸಿರಿ. (ಮೂರಕ್ಕೆ ಮಾತ್ರ) **2×3=6**

(i) ಗಾಂಧೀಜಿಯವರು ಯಾರ ಸೇವೆಯಲ್ಲಿ ಮಾತ್ರಪೂಜೆಯನ್ನು ಕಂಡರು?

(ii) ನಮ್ಮ ದೇಶದಲ್ಲಿರುವ 4 ಮೂಢನಂಬಿಕೆಗಳನ್ನು ತಿಳಿಸಿ.

(iii) ಕೋಲು ಜೇನು ಕುರಿತು ಬರೆಯಿರಿ.

(iv) ಕೊಕ್ಕರೊಳು ಮೀನುಗಳನ್ನು ಹೇಗೆ ಹಿಡಿಯುತ್ತವೆ?

**31** ಈ ಕೆಳಗಿನ ಪ್ರಶ್ನೆಗಳಲ್ಲಿ ಒಂದು ಪ್ರಶ್ನೆಗೆ 40 ರಿಂದ 45 ಪದಗಳಲ್ಲಿ ಉತ್ತರಿಸಿ. **1×3=3**

(i) ದೇವಸ್ಥಾನಕ್ಕೆ ಬರುವ ವರಮಾನ ಕುರಿತು ಲೇಖಕರ ಅಭಿಪ್ರಾಯವೇನು?

(ii) ಹುಯೆನ್-ತ್ಸಾಂಗ್ ಇಂಡಿಯಾ ದೇಶಕ್ಕೆ ಬಂದ ಮಾರ್ಗ ಹೇಗಿತ್ತು? ತಿಳಿಸಿರಿ.



**Unnati Educations**
**9899436384, 9654279279**